ಎಂದು ಹೇಳಿದ. ಇಂಥ ಹೊತ್ತಿನಲ್ಲಿ ಮಾತ್ರ ಮಾದೇವಿಯನ್ನು ನಿರಂತರ ಕಾಡುತ್ತಿದ್ದ ಸಂಕೋಚ, ಭಯ, ಅನಾಥಭಾವ ಇವು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಿದ್ದವು. ಇದರೊಂದಿಗೆ ಮನೆ ಬಿಟ್ಟು ಬರುವಾಗಲೇ ವಿರೂಪಾಕ್ಷಿ ಕದ್ದು ತಂದಿದ್ದ ರೇಷ್ಮೆ ಸೀರೆಯನ್ನು ಉಡಿಸಿ ಚಿನ್ನದ ಸರವನ್ನು ಕೊರಳಿಗೆ ಹಾಕಿ ಈಗ ಮಾದೇವಿ ನಿಜವಾಗಿಯೂ ರಾಣಿಯೇ ಅಂದ. ಹುಡುಗನ ಹೊಗಳಿಕೆ ಕಿವಿಗೆ ಬೀಳಲು ಹುಡುಗಿ ಕೊಂಚ ಮೈ ಮರೆತಳು. ಆದರೆ ಎಷ್ಟು ಪ್ರಯತ್ನಿಸಿದರೂ ಅವಳಿಗೆ ಊರು ಕೇರಿಯ ನೆನಪು, ಅಪ್ಪ ಅವ್ವ ಮತ್ತು ಸಂಬಂಧಿಕರ ಭಯ ಮಾತ್ರ ಹೋಗದೆ ಆಗಾಗ್ಗೆ ಅವರೆಲ್ಲ ಮನಸ್ಸಿಗೆ ಬರಲು ಬೆಚ್ಚಿ ಬೀಳುತ್ತಿದ್ದಳು.

ಹೀಗೆಯೇ ಹೋಟೆಲ ರೂಮಿನಲ್ಲಿ ಒಂದೆರಡು ತಿಂಗಳು ಕಳೆಯಲು ವಿರೂಪಾಕ್ಷಿಯ ಕೈಯಲ್ಲಿದ್ದ ಕಾಸು ಕರಗುತ್ತ ಬಂತು. ಇದಕ್ಕಿಂತಲೂ ಬೇಸರದ ಸಂಗತಿಯೆಂದರೆ ಇಬ್ಬರಿಗೂ ಬೆಳಗೆದ್ದರೆ ಮಾಡಲೇನೂ ಕೆಲಸವಿಲ್ಲದೇ ಹೋದದ್ದು. ಏನಾದರೂ ಮಾತಾಡಲು ಹೋದರೆ ಆಡುತ್ತಿದ್ದ ಮಾತುಗಳು ಆದದೇ ಆಗಿ ಜಿಗುಪ್ಸೆ ಹುಟ್ಟತೊಡಗಿತ್ತು. ಇದರೊಂದಿಗೆ ವಿರೂಪಾಕ್ಷಿಗೆ ಹೋಟೆಲ ಊಟ ತಿಂದು ತಿಂದು ಸಾಕಾಗಿ ಹೋಗಿತ್ತು. ಹೋಗಲಿ ಮಾದೇವಿ ಅಡಿಗೆ ಮಾಡುವುದೆಂದರೆ ಹೋಟೆಲ ಆ ಚಿಕ್ಕ ಕೋಣೆಯಲ್ಲಿ ಅಡುಗೆ ಮಾಡುವುದಿರಲಿ, ಬರಿ ಕೈಕಾಲು ಆಡಿಸುವುದೂ ಕಷ್ಟವಾಗಿತ್ತು.

ಒಂದು ದಿನ ಬೆಳಗು ವಿರೂಪಾಕ್ಷಿ ಮಾದೇವಿಯನ್ನು ಹೋಟೆಲಲ್ಲಿ ಬಿಟ್ಟು ಮಾಮೂಲಂತೆ ಪೇಟೆ ಸುತ್ತಿ ಬರಲು ಹೊರಟ. ಅಲ್ಲೇ ಅಪ್ಪ ಚಿಕ್ಕಪ್ಪ ಮೂರ್‍ನಾಲ್ಕು ಜನ ನೆಂಟರಿಷ್ಟರು, ಚಿಕ್ಕಪ್ಪ ಇದ್ದು 'ಲೇ ಇರಪಕ್ಸಿ ಕಂಡ ಹುಡಿಗೇರಿಂದೆ ಇನ್ನೆಸ್ಟ್ ದಿನ ಸುತ್‌ಬೇಕು ಅಂಧ್ಕಂಡೀಯಲೇ ನಡಿ, ಇಗಾ ನೋಡು ನಿಂಗೆ ಕನ್ನೆ ಕೊಡೋ ನೆಂಟ್ರು ಇಲ್ಲೇ ಬಂದವ್ರೆ' ಅಂದ. ಇದರೊಂದಿಗೆ ಅಪ್ಪ ಬೇರೆ, ಅವ್ವ ತನ್ನನ್ನು ನೋಡಲು ಅನ್ನ ನೀರು ಬಿಟ್ಟು ಹಂಬಲಿಸುತ್ತಿರುವುದಾಗಿ ಹೇಳಿದರು. ಈ ಹೊತ್ತಿಗೆ ಸರಿಯಾಗಿ ವಿರೂಪಾಕ್ಷಿಗೆ ಮಾದೇವಿಯ ಮೇಲಿನ ವ್ಯಾಮೋಹವೂ, ಕೈಯಲ್ಲಿದ್ದ ಕಾಸಿನಂತೆಯೇ ಕರಗಿ ಬಂದಿತ್ತು. ಯಾಕೋ ಏನೋ ತನಗೆ ತಾನೇ ಬೇಜಾರುಗೊಂಡಿದ್ದವನು. ಅಪ್ಪ ಚಿಕ್ಕಪ್ಪ ಕರೆಯುತ್ತಿದ್ದಂತೆಯೇ ಅವರೊಂದಿಗೆ ಬಸ್ಸು ಹತ್ತಿ ಬಿಟ್ಟ.

ವಿರೂಪಾಕ್ಷಿ ಊರಿಗೆ ಬಂದ ಮೇಲೆ ಹೆಣ್ಣು ಗಂಡಿನ ಕಡೆಯವರಲ್ಲಿ ಮಾತುಕತೆಯಾಯಿತು. ಹೆಣ್ಣಿನ ತಂದೆ ಚೆಲುವರಾಯಪ್ಪನವರಿದ್ದು, ತಮಗಿರುವುದು ಎರಡೇ ಮಕ್ಕಳು, ಎರಡು ಕಣ್ಣಿನಂತೆ ಒಂದು ಹೆಣ್ಣು, ಒಂದು ಗಂಡು. ಆಸ್ತಿ ಇಬ್ಬರಿಗೂ ಉಂಟು. ಹೆಣ್ಣು ಮಗುವನ್ನಂತೂ ಅದೆಷ್ಟು ಪ್ರೀತಿಯಿಂದ ಸಾಕಿದ್ದೇವೆಂದರೆ ಅಂಗಳದ ಮುಂದಿನ ಬಾವಿ ಎಷ್ಟು ಹೆಜ್ಜೆ ದೂರದಲ್ಲಿದೆ ಎಂಬುದೂ ಅವಳಿಗೆ ತಿಳಿಯದು ಎನ್ನುತ್ತ ಆ ಮಾತು ಹಾಗಿರಲಿ ಈಗ ತಮ್ಮ ತಮ್ಮ ಅಂತಸ್ತಿಗೆ ತಕ್ಕಂತೆ ಲಗ್ನವಾಗಬೇಕೆಂಬ ಮಾತಿಗೆ ಬಂದರು.

ಚೆಲುವರಾಯಪ್ಪನವರು ಮೇಲಿನಂತೆಲ್ಲ ಮಾತಾಡುವಾಗ್ಗೆ ಯಾಕೋ ಸಣ್ಣಬಸಪ್ಪನವರು ತಲೆಕೆಳಗು ಮಾಡಿಕೊಂಡು ಕೂತಿದ್ದರು. ಆಗ ಚೆಲುವಣ್ಣನವರೇ, ಬಸಪ್ಪನವರ ಕಿವಿಯಲ್ಲಿ ಸಣ್ಣ ದನಿಯೊಳಗೆ 'ಅಯ್ಯೋ ತಗೀರಿ ಬಸಣ್ಣೋರೆ ಹುಡುಗ ಇಸ್ಟ್ ದಿನ ಪೇಟೇಲಿದ್ದ ಅಂತ ತಾನೇ ನಿಮ್ ಯಥೆ. ಪ್ರಾಯಕ್ಕೆ ಬಂದವು ಮಾಡದಿನ್ನೇನು? ಹೋಗ್ಲಿ ನಾವು ನೀವು ಮಾಡದೇ ಇರದನ್ನೇನಾದರು ನಿಮ್ಮುಡುಗ ಮಾಡವುನೊ?' ಎನ್ನಲು ಬೀಗ ಬೀಗರಲ್ಲಿ ನಗು ಎದ್ದುಕೊಂಡಿತು.

ಇತ್ತ ವಿರೂಪಾಕ್ಷಿ ಹೇಳದೇ ಕೇಳದೇ ಪರಾರಿಯಾದ ಮೇಲೆ ಮಾದೇವಿಯೊಬ್ಬಳೇ ಹೋಟೆಲ